4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಉಪಾಧ್ಯಕ್ಷರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ 1998ರ ದಿ ಎಲೆಕ್ಟ್ರಿಸಿಟಿ ಲಾಸ್ (ಕರ್ನಾಟಕ ಅಮೆಂಡ್‌ಮೆಂಟ್) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 1-4-1998 ರಂದು ಹೊರಡಿಸಲಾದ ಸಂವ್ಯಶಾಇ 4 ಶಾಸನ 98 ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುವುದು.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಭೆಯ ಮುಂದೆ ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ 1998ರ ದಿ ಎಲೆಕ್ಟ್ರಿಸಿಟಿ ಲಾಸ್ (ಕರ್ನಾಟಕ ಅಮೆಂಡ್‌ಮೆಂಟ್) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 1-4-1998 ರಂದು ಹೊರಡಿಸಲಾದ ಸಂವ್ಯಶಾಇ 4 ಶಾಸನ 98 ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

(1) ತುಮಕೂರು ಹೇಮಾವತಿ ನಾಲ ವಲಯದಲ್ಲಿ ನಾಲೆಗೋಸ್ಕರ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ.

+ ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಉಪಾಧ್ಯಕ್ಷರೇ, ಈ ತುಮಕೂರು ಹೇಮಾವತಿ ನಾಲಾ ವಲಯದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಒಂದು ಕಛೇರಿ ಇದೆ. ಇವತ್ತು ಸಾವಿರಾರು ಎಕರೆ ಜಮೀನು ಈ ನಾಲೆಗೋಸ್ಕರ ಸ್ವಾಧೀನಪಡಿಸಿಕೊಂಡಿದ್ದಾರೆ. ಭೂಸ್ವಾಧೀನದ ಕಾಯ್ದೆಯಡಿಯಲ್ಲಿ ಕೆಲವು ಜಮೀನುಗಳನ್ನು ತೆಗೆದುಕೊಂಡಿದ್ದಾರೆ ಮತ್ತೆ ಕೆಲವೊಂದು ರೈತರಿಗೆ ನಿಮಗೆ ಪರಿಹಾರವನ್ನು ಹೆಚ್ಚಿಗೆ ಕೊಡಿಸುತ್ತೇವೆ ಮತ್ತು ಬೇಗ ಕೊಡಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಒಂದು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ನಾನೇನು ಹೇಳಲಿಕ್ಕೆ ಹೊರಟಿದ್ದೇನೆಂದರೆ ಎಂ.ಪಿ.ಪ್ರಕಾಶ್‌ರವರು ಮತ್ತು ಉಪಮುಖ್ಯಮಂತ್ರಿಗಳೂ ಇಲ್ಲಿದ್ದಾರೆ. ಇದನ್ನು ಗಮನಿಸಬೇಕು. I am making a statement on the floor of the House. It is a very serious in nature and particularly so far as my constituency is concerned, it is a serious matter. ಈಗ ಏನಾಗಿದೆ ಎಂದರೆ ಈ ತುಮಕೂರು ಹೇಮಾವತಿ ನಾಲಾ ವಲಯದಲ್ಲಿ ಜಮೀನನ್ನು ಕಳೆದುಕೊಂಡಿರುವವರಿಗೆ ಪರಿಹಾರ ಕೊಡುವ ಒಂದು ಕಛೇರಿ. ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ.

ಇಲ್ಲಿ ಏನಾಗಿದೆ ಎಂದರೆ ನಾನು ಏಕೆ ಶೂನ್ಯವೇಳೆಯಲ್ಲಿ ಇದನ್ನು ರೈಜ್ ಮಾಡಬೇಕಾಗಿ ಬಂತು ಎಂದರೆ ನನ್ನ ಕ್ಷೇತ್ರದಲ್ಲಿ ಜಮೀನನ್ನು ಕಳೆದುಕೊಂಡರು ಹೇಮಾವತಿ ನಾಲೆಗೋಸ್ಕರ. ಹಾಗೆ ಜಮೀನನ್ನು ಕಳೆದುಕೊಂಡಿರುವವರಿಗೆ ಜನಗಳಿಗೆ ನೀರು ಸಿಗುವುದಿಲ್ಲ. ಅವರಿಗೆ ನೀರು ಬರುವುದಿಲ್ಲ. ನೀರು ಬೇರೆ ಕಡೆ ಹೋಗುತ್ತದೆ. ನೂರಾರು ಎಕರೆ ಜಮೀನನ್ನು ಕಳೆದುಕೊಂಡಿದ್ದಾರೆ. ಶೇಕಡ 95 ಭಾಗ ಅದರಲ್ಲಿ ಎಲ್ಲಾ ಬಡವರು, ಕಡುಬಡವರು, ಅಂಥವರು ಇವತ್ತು ಪರಿಹಾರ ಪಡೆಯಲಿಕ್ಕೆ ತಮ್ಮ ಒಡವೆಗಳನ್ನು ಅಡವು ಇಟ್ಟು ಲಂಚವನ್ನು ಕೊಡುವ ಒಂದು ಕರ್ಮಕಾಂಡವನ್ನು ನನಗೆ ಹೇಳಿದಾಗ I had no other go except to make a statement before this House. ದಯಮಾಡಿ ನಾನು ಏನು ಹೇಳುತ್ತೇನೆ ಎಂದರೆ ಇವತ್ತು ಏನು ನೀವು ಕ್ರಮ ಜರುಗಿಸುತ್ತೀರಿ, ಏನು ಮಾಡುತ್ತೀರಿ ಎನ್ನುವುದು ನನಗೆ ಮುಖ್ಯವಲ್ಲ. ಆದರೆ ಜಮೀನನ್ನು ಕಳೆದುಕೊಂಡು ಪರಿಹಾರಕ್ಕೆ ಅಲೆಯುತ್ತಿರುವ ಮನುಷ್ಯ ಲಂಚವನ್ನು ಕೊಟ್ಟು ಪರಿಹಾರವನ್ನು ಪಡೆಯುವ ಒಂದು ವ್ಯವಸ್ಥೆ ಏನು ಇದೆ, ಇದು ತಪ್ಪಬೇಕು. ಇದರ ಬಗ್ಗೆ Although I am making a false statement but still it is before the Government to conduct an enquiry by the Deputy Commissioner or the Divisional Commissioner. After the report they can take a decision. ನನ್ನ ಕ್ಷೇತ್ರದಲ್ಲಿ ಭೂಮಿ ಕಳೆದುಕೊಂಡಿರುವ ಜನರಿಗೆ ತಕ್ಷಣ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎಂದು ತಮ್ಮ ಮುಂದೆ ಮನವಿ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಒಡವೆ ಅಡವು ಇಟ್ಟು ಇವತ್ತು ಪರಿಹಾರ ಕೇಳಬೇಕಾದ ಸ್ಥಿತಿ ತುಮಕೂರು ಜಿಲ್ಲೆಯಲ್ಲಿ ಹೇಮಾವತಿಗೆ ಜಮೀನು ಕೊಟ್ಟವರಿಗೆ, ನ್ಯಾಷನಲ್ ಹೈವೇಸ್‌ಗೆ ಜಮೀನು ಕೊಟ್ಟವರಿಗೆ ಈ ಅಧಿಕಾರಿ ತಂದುಬಿಟ್ಟಿದ್ದಾನೆ. ಇದರಲ್ಲಿ ಮುದ್ದಹನುಮೇಗೌಡರು ಹೇಳಿರುವುದರಲ್ಲಿ ಏನೂ ಅಸತ್ಯವಿಲ್ಲ. ಒಂದು ಕಡೆ ನಿಮ್ಮ ಹತ್ತಿರ ಹಣ ಇಲ್ಲ. ಎಲ್.ಓ.ಸಿ.ನೇ ತಾವು ಕೊಟ್ಟಿಲ್ಲ, ದುಡ್ಡು ರಿಲೀಸ್ ಆಗುವುದಿಲ್ಲ ಎಂದು ನಾಗೇಗೌಡರು ಹೇಳುತ್ತಾರೆ. ಇನ್ನೊಂದು ಕಡೆ ಎಲ್ಲರಿಗೂ ಆತ ಪ್ರಚಾರ ಮಾಡುತ್ತಿದ್ದಾನೆ, ಯಾರ್ಯಾರು ಬಂದು ನನಗೆ ದುಡ್ಡು ಕೊಡುತ್ತೀರಿ, ಅವರಿಗೆ ನಾನು ಪರಿಹಾರವನ್ನು ತಕ್ಷಣ ರಿಲೀಸ್ ಮಾಡಿಸಿಕೊಡುತ್ತೇನೆ ಎಂದು ಹೇಳಿ ಹೇಳುತ್ತಿದ್ದಾನೆ. 1987 ರಿಂದ ಪರಿಹಾರ ಬಾಕಿ ನಿಂತಿದೆ. ಅವರಿಗೆ ಏನಾದರೂ ಆಗಲಿ, ಬಂದಷ್ಟು ಬರಲಿ ಎಂದು ಹೇಳಿ ಒಂದು ಕಡೆ ಬೇಡುವುದು. ಇನ್ನೊಂದು ಕಡೆ ಈ ರೀತಿ ದುಡ್ಡು ತೆಗೆದುಕೊಂಡು ಹೋಗಿ ಕೊಡುವುದು ಈ ಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ತನಿಖೆ ಮಾಡಿಸಬೇಕು. ಅಲ್ಲಿಯವರೆಗೆ ಈ ಅಧಿಕಾರಿಯನ್ನು ಅಲ್ಲಿಂದ ಸ್ಥಾನಪಲ್ಲಟ ಮಾಡಿ ಬೇರೆ ಯಾರನ್ನಾದರೂ ಅಲ್ಲಿಗೆ ಹಾಕಿಸಿ ಈ ರೆಕಾರ್ಡ್ಸ್ ಪ್ರೊಸೆಸ್ ಮಾಡುವಂಥ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು.

ಇಲ್ಲದಿದ್ದರೆ ಯಾರಿಗೂ ಮಾರ್ಯಾದೆ ಬರುವ ಹಾಗೆ ಇಲ್ಲ. ಪ್ರತಿ ತಾಲ್ಲೂಕಿನಲ್ಲಿ ಈ ಕೆಲಸವನ್ನೂ ಆತ ನಡೆಸುತ್ತಿದ್ದಾನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಇಬ್ಬರು ಶಾಸಕರು ಮಾಡಿರತಕ್ಕಂಥದ್ದು ಆಪಾದನೆ ಏನು ಇದೆ, ಇದು ನಿಜವಾಗಿಯೂ ಕೂಡ ತಲೆತಗ್ಗಿಸುವಂಥದ್ದು. ಯಾವುದೇ ಒಬ್ಬ ಅಧಿಕಾರಿ ಪರಿಹಾರ ಕೊಡುವ ಸಂದರ್ಭದಲ್ಲಿಯೂ ಕೂಡ ಈ ರೀತಿಯಾದ ಅವ್ಯವಹಾರ ಮತ್ತು ಭ್ರಷ್ಟಾಚಾರಕ್ಕೆ ಒಳಗಾದರೆ ಇದನ್ನು ಸರ್ಕಾರ ಸಹಿಸುವುದಿಲ್ಲ. ಈ ದಿವಸವೇ ನಾನು ಜಿಲ್ಲಾಧಿಕಾರಿಗಳಿಗೆ ಫೋನ್ ಮೂಲಕ ಎನ್‌ಕ್ವೈರಿ ಮಾಡಿ ರೆಕಾರ್ಡ್ಸ್‌ಗಳನ್ನೆಲ್ಲಾ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇವೆ. ಮಾನ್ಯ ನಮ್ಮ ನೀರಾವರಿ ಸಚಿವರು ಬಂದನಂತರ ಅಥವಾ ರೆವಿನ್ಯೂ ಸಚಿವರು ಬಂದನಂತರ ಆ ಅಧಿಕಾರಿಯ ಬದಲಾವಣೆಯೊ ಮತ್ತೊಂದೊ ಅದರ ಬಗ್ಗೆ ವಿಚಾರಣೆ ನಡೆಸತಕ್ಕಂಥದ್ದೋ ಆ ಕ್ರಮವನ್ನು ಸರ್ಕಾರದ ವತಿಯಿಂದ ಕೈಗೊಳ್ಳುತ್ತೇವೆ.

12.50 ಪಿ.ಎಂ

(2) ಮೈಸೂರಿನ ಕ್ರೀಡಾಂಗಣ ಕಾಮಗಾರಿ ಗುತ್ತಿಗೆದಾರರಿಗೆ ಹಣ ನೀಡದೆ ಇರುವುದು.

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಉಪಾಧ್ಯಕ್ಷರೆ, ಮೈಸೂರು ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಇಂಡೋರ್ ಸ್ಟೇಡಿಯಂ ನಿರ್ಮಿಸಲಾಗಿದೆ. ಭಾರತ ಸರ್ಕಾರದ ಸ್ವಾಮ್ಯಕ್ಕೆ ಸೇರಿರುವ ಹಿಂದುಸ್ತಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್‌ಗೆ ಕ್ರೀಡಾಂಗಣ ನಿರ್ಮಿಸಲು ಗುತ್ತಿಗೆ ನೀಡಲಾಗಿತ್ತು. ಆದರೆ, ಇವರಿಂದ ಹೆಚ್.ಆರ್.ಕೃಷ್ಣಮೂರ್ತಿ ಎನ್ನುವವರು ಉಪ ಗುತ್ತಿಗೆ ಪಡೆದು ಕ್ರೀಡಾಂಗಣದ ಸಂಪೂರ್ಣ ಕೆಲಸ ಮಾಡಿ ಮುಗಿಸಿದ್ದಾರೆ. ಈಗಾಗಲೇ ಸದರಿ ಕ್ರೀಡಾಂಗಣದ ಉದ್ಘಾಟನೆಯಾಗಿ ಒಂದು ವರ್ಷವಾಗಿದ್ದರೂ ಕ್ರೀಡಾಂಗಣದ ಕಾಮಗಾರಿ ಮುಗಿಸಿರುವ ಎಚ್.ಆರ್.ಕೃಷ್ಣಮೂರ್ತಿಯವರಿಗೆ ಇಲ್ಲಿಯವರೆವಿಗೂ ಹಣ ಪಾವತಿಯಾಗಿಲ್ಲ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ದೊಡ್ಡ ಸಾಧನೆ ಮಾಡಿದೆಯೆಂದು ತಾವು ಬಜೆಟ್‌ನಲ್ಲೂ ಸಹ ಹೇಳಿದ್ದೀರಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಲ್ಲದೆ, ಸರ್ಕಾರ ಕ್ರೀಡಾ ಸಮುಚ್ಛಯಗಳನ್ನು ನಿರ್ಮಾಣ ಮಾಡಿದೆಯೆಂಬ ವಿಚಾರವನ್ನೂ ಸಹ ತಿಳಿಸಿದ್ದು, ಗುತ್ತಿಗೆದಾರರಿಗೆ ಪೇಮೆಂಟ್ ಮಾಡಿಲ್ಲ. ಯಾರದೋ ದುಡ್ಡಿನಲ್ಲಿ ನಾವು ಸಾಧನೆ ಮಾಡಿದ್ದೇವೆಂದು ಸರ್ಕಾರ ಹೇಳಿಕೊಳ್ಳುವುದು ಹೆಚ್ಚುಗಾರಿಕೆಯಲ್ಲ. ಗುತ್ತಿಗೆದಾರರು ಒಂದು ವರ್ಷದಿಂದ ತಮ್ಮ ಮನೆ-ಮಠ